

## ವಯಾಗ್ರ: ಕಾಮಕ್ಕೆ ಕಸ್ತೂರಿ, ಕಿವಿಗೆ ಕತ್ತರಿ

ಅತಿಯಾದ ವಯಾಗ್ರ ಸೇವನೆಯಿಂದ ಕಿವಿ ಕಿವುಡಾಗುವ ಸಾಧ್ಯತೆ ಹೆಚ್ಚು! ಇದೀಗ ಸಂಶೋಧಕರ ಅಧಿಕೃತ ಎಚ್ಚರಿಕೆ. ಜಾಗತಿಕ ಮಟ್ಟದಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ, ವಯಾಗ್ರ ಸೇವನೆಯು ಹಲವರಲ್ಲಿ ತಕ್ಷಣ ಕಿವುಡಾಗಿರುವ ಉದಹಾರಣೆಗಳು ಸಿಕ್ಕಿವೆಯಂತೆ. ಈ ಕುರಿತು ಅಮೆರಿಕದ ವಿಜ್ಞಾನಿಗಳು ಬಳಕೆದಾರರಿಗೆ ಎಚ್ಚರಿಕೆ ನೀಡಿದ್ದಾರೆ. ಇದೇ ವೇಳೆ ಬ್ರಿಟಿಷ್ ವಿಜ್ಞಾನಿಗಳೂ ಸಹ ವಯಾಗ್ರ ಉಪಟಳದ ಕುರಿತು ಬ್ರಿಟನ್ನಿನ ಕೆಲ ಪತ್ರಿಕೆಗಳಲ್ಲಿ ಬರೆದಿದ್ದಾರೆ.



ಈವರೆಗೂ ವಯಾಗ್ರ ಸೇವಿಸಿದ ಕೆಲವೇ ಕ್ಷಣಗಳಲ್ಲಿ ಕಿವಿ ಕೇಳಿಸದ 47 ಘಟನೆಗಳು ವರದಿಯಾಗಿವೆಯಂತೆ. ಕೆಲವರಿಗೆ ಒಂದು ಕಿವಿಯಾದರೆ, ಇನ್ನೂ ಕೆಲವರಿಗೆ ಎರಡೂ ಕಿವಿಗಳು ಕಿವುಡಾಗಿವೆ. ಇದಕ್ಕೆ ವಯಾಗ್ರ ಅಥವಾ ಅದಕ್ಕೆ ಸಂಬಂಧಪಟ್ಟ ಸಿಯಾಲಿಸ್ ಹಾಗೂ ಲೆವಿಟ್ರಾ ಕಾರಣ ಎಂದು ಈ ವಿಜ್ಞಾನಿಗಳು ಸಂದೇಹಪಟ್ಟಿದ್ದಾರೆ.

ವಯಾಗ್ರದಿಂದ ಈ ರೀತಿ ಕಿವುಡುತನದ ಸಮಸ್ಯೆ ಎದುರಿಸುತ್ತಿರುವವರ ಸರಾಸರಿ ವಯೋಮಾನ 58 ವರ್ಷಗಳು. ಆದರೆ 37ರ ಆಸುಪಾಸಿನ ಇಬ್ಬರು ವಯಾಗ್ರ ಸೇವಿಸಿ ಕಿವುಡರಾಗಿರುವ ಘಟನೆ ಅಮೆರಿಕದಲ್ಲಿ ನಡೆದಿದೆ. ಆದರೆ ಈ ಕಿವುಡತನ ಎಲ್ಲಿಯವರೆಗೆ ಎನ್ನುವುದು ಇನ್ನೂ ತಿಳಿದುಬಂದಿಲ್ಲ. ವಯಾಗ್ರ ಸೇವಿಸಿದ ಕೂಡಲೇ ಕೆಲವೊಂದು ಸೋಂಕಿನಿಂದ ಹಾಗೂ ಸೇವಿಸಿದ ಸಂದರ್ಭದಲ್ಲಿ ಭಾರೀ ಶಬ್ಧಗಳು ಕೇಳಿದಾಗ ಕಿವಿಗೆ ಹಾನಿಯಾಗಬಹುದು ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ.

ಅಮೆರಿಕದಲ್ಲಿ ಈಗಾಗಲೇ ವಯಾಗ್ರ, ಸಿಯಾಲಿಸ್ ಅಥವಾ ಲೆವಿಟ್ರಾ ಸೇವಿಸುವವರಿಗೆ ಈ ರೀತಿ ಕಿವಿ ಸಮಸ್ಯೆ ಕಂಡುಬಂದಲ್ಲಿ ತಕ್ಷಣವೇ ವಯಾಗ್ರ ಸೇವನೆ ನಿಲ್ಲಿಸಿ, ವೈದ್ಯರನ್ನು ಸಂಪರ್ಕಿಸಬೇಕಾಗಿ ಕರೆ ನೀಡಿದ್ದಾರೆ. ಆದರೆ ಬ್ರಿಟಿಷ್ ವಿಜ್ಞಾನಿಗಳಿಗೆ ವಯಾಗ್ರ ಹೇಗೆ ಕಿವುಡುತನ ತರುತ್ತದೆ ಎನ್ನುವ ಬಗ್ಗೆ ನಿಖರ ಮಾಹಿತಿ ಲಭಿಸಿಲ್ಲ. ಆದರೆ ವಯಾಗ್ರದಲ್ಲಿರುವ ಅತಿಯಾದ ರಾಸಾಯನಿಕ ಅಂಶ ಒಳಕಿವಿಗೆ ಹಾನಿಗೊಳಗಾಗಬಹುದು ಎಂದು ಹೇಳಿದ್ದಾರೆ.

## ಯೋಗ ಮಾಡಿದರೆ ಸ್ತನ ಕ್ಯಾನ್ಸರ್ ನಿಯಂತ್ರಣ

ನಿತ್ಯ ಯೋಗಾಭ್ಯಾಸದಿಂದ ಮಹಿಳೆಯರು ನೆಮ್ಮದಿಯ ಹಾಗೂ ಆರೋಗ್ಯವಂತ ಜೀವನ ನಡೆಸಲು ಸಹಕಾರಿಯಾಗಲಿದೆ. ಅದರಲ್ಲೂ ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಹಿಳೆಯರು ಮತ್ತು ಈಗಾಗಲೇ ರೇಡಿಯೇಷನ್ ಥೆರಪಿ ಮಾಡಿಸಿಕೊಂಡ ಮಹಿಳೆಯರಂತೂ ನಿತ್ಯ ಯೋಗಾಭ್ಯಾಸ ಖಡ್ಡಾಯ ಎಂದು ಭಾರತ ಹಾಗೂ ಅಮೆರಿಕ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ನಿತ್ಯ ಪ್ರತಿಯೊಬ್ಬರೂ ಮಾಡಬಹುದಾದಂತ ಸರಳ ಆಸನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಆರೋಗ್ಯ ಕಾಪಾಡಿಕೊಳ್ಳುವುದರ ಜತೆಗೆ 'ಕಾರ್ಟಿಸಾಲ್' ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಬಹುದು ಎಂದು ಸಂಶೋಧಕರು ಹೇಳುತ್ತಾರೆ.

ದೇಹದಲ್ಲಿ ಕಾರ್ಟಿಸಾಲ್ ಪ್ರಮಾಣ ಹೆಚ್ಚಾದಂತೆ ಕ್ಯಾನ್ಸರ್‌ನಿಂದ ಬಳಲುವವರು ಬಹಳಷ್ಟು ತೊಂದರೆ ಅನುಭವಿಸುತ್ತಾರೆ. ಈ ಕುರಿತು ಬೆಂಗಳೂರು ಮೂಲದ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ಸಂಶೋಧನೆ ನಡೆಸಿದೆ. ಇವರೊಂದಿಗೆ ಟೆಕ್ಸಾಸ್ ವಿಶ್ವವಿದ್ಯಾಲಯದ ಆಂಡ್ರೆಸನ್ ಕ್ಯಾನ್ಸರ್ ಕೇಂದ್ರದ ವಿಜ್ಞಾನಿಗಳು ಸಹ ಪಾಲ್ಗೊಂಡಿದ್ದರು.

ಈ ಮೊದಲು ಯೋಗಾಭ್ಯಾಸದಿಂದ ಸ್ಟ್ರೆಸ್ ಚಿಕಿತ್ಸೆಯಿಂದ ಆಗುವ ಆಯಾಸ ನಿವಾರಣೆಗೆ ಮಾತ್ರ ಸಹಕಾರಿ ಎಂದು ಊಹಿಸಲಾಗಿತ್ತು. ಆದರೆ ನಂತರ ಯೋಗದಿಂದ ಗುಣವಾಗದ, ಕ್ಲಿಷ್ಟಕರ ಕಾಯಿಲೆಗಳಿಗೂ ಸಹಕಾರಿ ಎಂಬ ಅಂಶವನ್ನು ಈ ತಂಡ ಪತ್ತೆಹಚ್ಚಿದೆ.

ಈ ಅಧ್ಯಯನಕ್ಕೆಂದೇ 52ರ ಆಸುಪಾಸಿನ, ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿರುವ 163 ಮಹಿಳೆಯರನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿತ್ತು. ಯೋಗಾಭ್ಯಾಸ ಮಾಡುವ ತಂಡ, ಕೇವಲ ವ್ಯಾಯಾಮ ಮಾಡುವ ತಂಡ ಹಾಗೂ ಯಾವುದನ್ನೂ ಮಾಡದ ತಂಡಗಳನ್ನಾಗಿ ವಿಂಗಡಿಸಲಾಗಿತ್ತು. ಇದರ ನಂತರ ತಮ್ಮ ಆರೋಗ್ಯದಲ್ಲಾದ ಬದಲಾವಣೆ ಕುರಿತು ವರದಿ ನೀಡುವಂತೆ ಅವರೆಲ್ಲರಿಗೂ ಸೂಚಿಸಲಾಗಿತ್ತು. ಈ ವರದಿಯಲ್ಲಿ ಖಿನ್ನತೆ ಹಾಗೂ ಆಧ್ಯಾತ್ಮ ಕುರಿತೂ ವರದಿ ನೀಡುವಂತೆ ಕೇಳಲಾಗಿತ್ತು. ಇದರ ಜತೆಗೆ ಈ ಮಹಿಳೆಯರ ಜೊಲ್ಲು ಮಾದರಿಯನ್ನು ಪಡೆಯಲಾಗುತ್ತಿತ್ತು. ಆರಂಭದಲ್ಲಿ ಪ್ರತಿಯೊಬ್ಬರನ್ನೂ ಎಲೆಕ್ಟ್ರೋಕಾರ್ಡಿಯೋಗ್ರಾಮ್ ಪರೀಕ್ಷೆಗೂ ಒಳಪಡಿಸಲಾಗಿತ್ತು. ಇದಾದ ನಂತರ ಮೂರು ಹಾಗೂ ಆರು ತಿಂಗಳಿಗೊಮ್ಮೆ ಇದೇ ಪರೀಕ್ಷೆ ನಡೆಸಲಾಯಿತು.

ಅಂತಿಮವಾಗಿ ರೇಡಿಯೇಷನ್ ಥೆರಪಿ ನೀಡಿದ ನಂತರ ಯೋಗಾ ಹಾಗೂ ವ್ಯಾಯಾಮ ನಡೆಸಿದ ಮಹಿಳೆಯರಲ್ಲಿ ಬಳಲಿಕೆ ತಗ್ಗಿತ್ತು. ಆದರೆ ಈ ಎರಡನ್ನೂ ಮಾಡದವರು ತೀರಾ ಸುಸ್ತಾಗಿದ್ದರು. ಯೋಗಾಭ್ಯಾಸ ಮಾಡಿದ ಮಹಿಳೆಯರು ವಿಕಿರಣ ಚಿಕಿತ್ಸೆಯ ನಂತರವೂ ದೈಹಿಕವಾಗಿ ಹಾಗೂ ಆರೋಗ್ಯದಲ್ಲಿ ಎಲ್ಲರಿಗಿಂಥ ಸದೃಢರಾಗಿದ್ದರು. ಜತೆಗೆ ಅವರ ದೇಹದಲ್ಲಿ ಕಾರ್ಟಿಸಾಲ್ ಪ್ರಮಾಣವೂ ಕಡಿಮೆಯಾಗಿತ್ತು.

■ ಇಎಸ್‌ಎಸ್




**ಬಿಳಿ ಮಚ್ಚೆಗಳು**

**ಸಂಪೂರ್ಣವಾಗಿ ಗುಣಪಡಿಸಬಹುದು**

ಹೊಸದಾಗಿ ಕಂಡುಹಿಡಿದಿರುವ ನಮ್ಮ ಔಷಧಿಗಳನ್ನು ಉಪಯೋಗಿಸಿದ ನಂತರ 5–6 ಗಂಟೆಗಳ ಸಮಯದಲ್ಲಿ ಬಿಳಿ ಮಚ್ಚೆಗಳ ಬಣ್ಣವು ಶರೀರದ ನೈಸರ್ಗಿಕ ಬಣ್ಣಕ್ಕೆ ಬದಲಾಗುತ್ತದೆ ಮತ್ತು ಕೆಲ ಸಮಯದ ತರುವಾಯ ಸಂಪೂರ್ಣವಾಗಿ ಗುಣವಾಗುತ್ತದೆ. ಮತ್ತೆ ಆ ಬಣ್ಣ ಬದಲಾಗದೆ ಶಾಶ್ವತವಾಗುಳಿಯುತ್ತದೆ. ಸಂಪೂರ್ಣ ಖಾತರಿಯುಳ್ಳ ಚಿಕಿತ್ಸೆ. ಖಾಯಂ ಚಿಕಿತ್ಸೆಗಾಗಿ ತಕ್ಷಣ ಸಂಪರ್ಕಿಸಿ:

**ಲೈಂಗಿಕ ಸಮಸ್ಯೆ**



ನೂತನ ಸಂಶೋಧನೆ. ಖಾತರಿಯಾದ ಚಿಕಿತ್ಸೆ. ತಕ್ಷಣ ಕ್ರಿಯಾಶೀಲ. ಶೀಘ್ರಸ್ಖಲನ, ಸ್ವಪ್ನಸ್ಖಲನ, ನಪುಂಸಕತೆ, ಗೊನೋರಿಯಾ, ಸಿಫಿಲಿಸ್, ಬಂಜೆತನ ಅಥವಾ ಯಾವುದೇ ರೀತಿಯ ಲೈಂಗಿಕತೆ/ ಶಿಶ್ನದ ತೊಂದರೆ ನಿವಾರಣೆಗಾಗಿ ತಕ್ಷಣ ಚಿಕಿತ್ಸೆ ಪಡೆಯಲು ದಯವಿಟ್ಟು ಸಂಪರ್ಕಿಸಿ:



**ಆಕರ್ಷಕ ಸ್ತನಗಳು**

ನಮ್ಮ ಆಯುರ್ವೇದಿಕ್ ಚಿಕಿತ್ಸೆ ಪಡೆಯುವ ಮೂಲಕ 20 ದಿನಗಳಲ್ಲಿ ನಿಮ್ಮ ಸ್ತನಗಳನ್ನು ವಿನೀತ, ಆಕರ್ಷಕ ಮತ್ತು ಸೌಂದರ್ಯ ವಾಗಿಸಿಕೊಳ್ಳಿ. ಶಹಿ ಚಿಕಿತ್ಸೆ ದರ ರೂ.630/– ತುರ್ತು ಚಿಕಿತ್ಸೆ ದರ ರೂ. 1575/– ತಕ್ಷಣ ನಮ್ಮನ್ನು ಸಂಪರ್ಕಿಸಿ.



**ಚರ್ಮದ ಕಾಯಿಲೆ**

**ಖಾತರಿಯಾದ ಚಿಕಿತ್ಸೆ**

ನಿಮ್ಮ ದೇಹದ ಯಾವುದೇ ಭಾಗದಲ್ಲಿ ಕಪ್ಪು, ಕೆಂಪು ಅಥವಾ ಬಿಳಿ ಬಣ್ಣದ ಯಾವುದೇ ರೀತಿಯ ಮಚ್ಚೆ, ಇಸುಬು, ಸೋರಿಯಾಸಿಸ್ ಅಥವಾ ಯಾವುದೇ ರೀತಿಯ ಉರಿಯ ಬಾಧೆ ಇದ್ದಲ್ಲಿ ಅದಕ್ಕೆ ಶಾಶ್ವತ ಚಿಕಿತ್ಸೆಗಾಗಿ ಪತ್ರದ ಮುಖೇನ ಅಥವಾ ಫೋನ್ ಮೂಲಕ ತಕ್ಷಣ ಸಂಪರ್ಕಿಸಿ.

ಚಂದ್ರ ಪ್ರಕಾಶ್ ವೈದ್ಯ, ಪಿ.ಒ.ಕತ್ರಿ ಸಾರೈ (ಗಯಾ)

**09308005644**

**09263574950**

**09852532866**